# ಸೋನು ಗೌಡ ಕೈಯಲ್ಲಿ ವೆಡ್ಡಿಂಗ್ ಗಿಫ್ಟ

**ಕೋ**ವಿಡ್ ಎರಡನೇ ಆತಂಕ ದೂರವಾಗುತ್ತಿದ್ದಂತೆ, ಸ್ಯಾಂಡಲ್‌ವುಡ್‌ನಲ್ಲಿ ಸಿನಿಮಾ ಚಟುವಟಿಕೆಗಳು ಮತ್ತೆ ಗರಿಗೆದರಿದ್ದು ಹೊಸ ಹುರುಪಿನಲ್ಲಿ ಬ್ಯಾಕ್ ಟು ಬ್ಯಾಕ್ ಸಿನಿಮಾಗಳು ಸೆಟ್ಟೇರುತ್ತಿವೆ. ನಟ, ನಟಿಯರು ಕೂಡ ಹೊಸ ಸಿನಿಮಾಗಳನ್ನು ಒಪ್ಪಿಕೊಂಡು ಶೂಟಿಂಗ್‌ನತ್ತ ಮುಖ ಮಾಡುತ್ತಿದ್ದಾರೆ. ಅಂತೆಯೇ ನಟಿ ಸೋನು ಗೌಡ ಕೂಡ ಈಗ ಸದ್ದಿಲ್ಲದೆ ಹೊಸ ಸಿನಿಮಾವೊಂದನ್ನು ಒಪ್ಪಿಕೊಂಡಿದ್ದಾರೆ. ಅಂದಹಾಗೆ, ಆ ಸಿನಿಮಾದ ಹೆಸರು 'ವೆಡ್ಡಿಂಗ್ ಗಿಫ್ಟ್'. ಇಲ್ಲಿಯವರೆಗೆ ಹೆಚ್ಚಾಗಿ ಹೋಮ್ಲಿ ಲುಕ್‌ನಲ್ಲಿ, ಸಾದಾಸೀದಾ ಹುಡುಗಿಯಾಗಿ ಕಾಣಿಸಿಕೊಳ್ಳುತ್ತಿದ್ದ ಸೋನು ಗೌಡ ಈ ಸಿನಿಮಾದಲ್ಲಿ ಮೊದಲ ಬಾರಿಗೆ ಔಟ್ ಆ್ಯಂಡ್ ಔಟ್ ಕಾರ್ಪೊರೇಟ್ ಗರ್ಲ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ.



ತಮ್ಮ ಹೊಸ ಚಿತ್ರ ಮತ್ತು ಪಾತ್ರದ ಬಗ್ಗೆ ಮಾತನಾಡುವ ಸೋನು ಗೌಡ, "ಇವತ್ತಿನ ಜನರೇಶನ್‌ನ ಟ್ರೆಂಡ್ ಸ್ಟೋರಿ ಈ ಸಿನಿಮಾದಲ್ಲಿದೆ. ನಾನು ಇಲ್ಲಿಯವರೆಗೆ ಮಾಡಿರುವ ಕ್ಯಾರೆಕ್ಟರ್‌ಗಳಿಗಿಂತ ಹೊಸಥರದ ಕ್ಯಾರೆಕ್ಟರ್ 'ವೆಡ್ಡಿಂಗ್ ಗಿಫ್ಟ್'ನಲ್ಲಿದೆ. ಇದರಲ್ಲಿ ನಾನು ಔಟ್ ಆ್ಯಂಡ್ ಔಟ್ ಕಾರ್ಪೊರೇಟ್ ಲೈಫ್ ಸ್ಟೈಲ್ ನಡೆಸುವ ಹುಡುಗಿಯ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತೇನೆ. ಎಲ್ಲವನ್ನೂ ಕಾರ್ಪೊರೇಟ್ ದೃಷ್ಟಿಯಲ್ಲೇ ನೋಡುವ ಹುಡುಗಿಯೊಬ್ಬಳ ಲೈಫ್‌ನಲ್ಲಿ ಮದುವೆಯ ನಂತರ ಏನೆಲ್ಲ ಬದಲಾವಣೆ ಆಗುತ್ತದೆ ಅನ್ನೋದರ ಸುತ್ತ ಸಿನಿಮಾ ನಡೆಯುತ್ತದೆ. ಕಾರ್ಪೊರೇಟ್ ಲೈಫ್ ಬಯಸುವ, ಇಂಡಿಪೆಂಡೆಂಟ್ ಆಗಿರುವಂಥ, ನಾನೇ ಎಲ್ಲವೂ ಎನ್ನುವಂಥ 'ಇಗೋ' ಇರುವಂಥ ಕ್ಯಾರೆಕ್ಟರ್ ನನ್ನದು. ಸ್ಕ್ರಿಪ್ಟ್‌ನಲ್ಲಿ ನನ್ನ ಪಾತ್ರ ಇಷ್ಟವಾಯ್ತು' ಎಂದು ತಮ್ಮ ಪಾತ್ರ ಪರಿಚಯ ಮಾಡಿಕೊಡುತ್ತಾರೆ ಸೋನು ಗೌಡ. 'ಸಿನಿಮಾಕ್ಕಾಗಿ ಈಗಾಗಲೇ ಒಂದಷ್ಟು ವರ್ಕ್‌ಶಾಪ್, ರಿಹರ್ಸಲ್ ಮಾಡಿದ್ದೇವೆ. ಸ್ಕ್ರೀನ್ ಮೇಲೆ ನನ್ನ ಕ್ಯಾರೆಕ್ಟರ್ ಹೊಸಥರದಲ್ಲಿ ಬರುತ್ತದೆ. ಆಡಿಯನ್ಸ್‌ಗೂ ಈ ಸಿನಿಮಾ ಇಷ್ಟವಾಗುತ್ತದೆ' ಎಂಬ ವಿಶ್ವಾಸದ ಮಾತುಗಳನ್ನಾಡುತ್ತಾರೆ ಸೋನು.

ಇನ್ನು 'ವೆಡ್ಡಿಂಗ್ ಗಿಫ್ಟ್' ಚಿತ್ರದಲ್ಲಿ ಸೋನು ಗೌಡ ಅವರಿಗೆ ನವ ನಾಯಕ ನಿಶಾನ್ ನಾಣಯ್ಯ ಜೋಡಿಯಾಗಿ ತೆರೆಮೇಲೆ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಹಿಂದಿ, ತಮಿಳು, ಮಲೆಯಾಂ, ಬೆಂಗಾಳಿ ಸೇರಿದಂತೆ ಸುಮಾರು 25ಕ್ಕೂ ಸಿನಿಮಾಗಳಲ್ಲಿ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಿದ ಅನುಭವವಿರುವ ನಿಶಾನ್ ನಾಣಯ್ಯ 'ವೆಡ್ಡಿಂಗ್ ಗಿಫ್ಟ್' ಮೂಲಕ ಮೊದಲ ಬಾರಿಗೆ ಸ್ಯಾಂಡಲ್‌ವುಡ್‌ನಲ್ಲಿ ಅದೃಷ್ಟ ಪರೀಕ್ಷೆಗೆ ಇಳಿಯುತ್ತಿದ್ದಾರೆ. 'ವಿಕ್ರಂ ಪ್ರಭು ಫಿಲಂಸ್' ಬ್ಯಾನರ್‌ನಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದ್ದು, ನವ ನಿರ್ದೇಶಕ ವಿಕ್ರಂ ಪ್ರಭು 'ವೆಡ್ಡಿಂಗ್ ಗಿಫ್ಟ್'ಗೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

## ಪಾಪ್ ಕಾರ್ನರ್

### ರಾಘವೇಂದ್ರ ರಾಜ್‌ಕುಮಾರ್‌ಗೆ ಜೀವಮಾನ ಸಾಧನೆ ಪ್ರಶಸ್ತಿ

ಕನ್ನಡ ಚಿತ್ರರಂಗದ ಹಿರಿಯ ನಟ ಮತ್ತು ನಿರ್ಮಾಪಕ ರಾಘವೇಂದ್ರ ರಾಜಕುಮಾರ್ ಅವರಿಗೆ 'ದಾದಾ ಸಾಹೇಬ್ ಫಾಲ್ಕೆ ಎಂಎಸ್‌ಕೆ ಟ್ರಸ್ಟ್' ವತಿಯಿಂದ ಜೀವಮಾನ ಸಾಧನೆ ಪ್ರಶಸ್ತಿ ದೊರೆತಿದೆ. ಈ ಕುರಿತಂತೆ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಪ್ರಶಸ್ತಿ ಸ್ವೀಕರಿಸಿದ ವೀಡಿಯೋವನ್ನು ಹಂ... ರಾಜಕುಮಾರ್, 'ಬೆಂಗಳೂರಿನಲ್ಲಿ ನಡೆದ ಇನ್ನೋವೇಟಿವ... ಸಮಾರಂಭದಲ್ಲಿ 'ದಾದಾ ಸಾಹೇಬ್ ಫಾಲ್ಕೆ ಎಂಎಸ್... ಸಾಧನೆ ಪ್ರಶಸ್ತಿಯನ್ನು ನನಗೆ ನೀಡಿ ಗೌರವಿಸಿದ್ದಾರ... ಕುಟುಂಬ ವರ್ಗ ಹಾಗೂ ನನ್ನೆಲ್ಲಾ ಅಭಿಮಾನಿ ... ತುಂಬು ಹೃದಯದ ಧನ್ಯವಾದಗಳು ಎಂದು ...

## ಕಡಲ ತೀರ...

'**ಕ**ಡಲ ತೀರದ ಭಾರ್ಗವ' ಎನ್ನುವ ಹೆಸರಿನಲ್ಲಿ ಸಿನಿಮಾವೊಂದು ತಯಾರಾಗುತ್ತಿರುವುದು ಗೊತ್ತಿರಬಹುದು. ಬಹುತೇಕ ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸುತ್ತಿರುವ ಈ ಚಿತ್ರ ಈಗ ಬಿಡುಗಡೆಯ ಹಂತಕ್ಕೆ ಬಂದಿದೆ. ಈಗಾಗ... ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್ ಕೆಲಸಗ... ಪೂರ್ಣಗೊಳಿಸಿರುವ 'ಕಡಲ ತೀರದ ಭಾರ್ಗವ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ.

ಇನ್ನು 'ಕಡಲ ತೀರದ ಭಾರ್ಗವ' ಎಂ... ನೆನಪಾಗುವುದು ಹಿರಿಯ ಸಾಹಿತಿ ಶಿವರಾ... ಹೆಸರು. ಆದರೆ ಈ ಸಿನಿಮಾಕ್ಕೂ ಶಿವರಾ... ಜೀವನಕ್ಕೂ ಯಾವುದೇ ಸಂಬಂಧವಿಲ್ಲ... ಸ್ಪಷ್ಟನೆ. ಇನ್ನು ಈ ಸಿನಿಮಾದಲ್ಲಿ... ಭಾರ್ಗವ... ಕಡಲ... ತೀರ... ಇನ... ವಿ...



## ಹಾಡಲ್ಲಿ ಓ ಮೈ ಲವ್

**ಜೆ**ಸಿಬಿ. ಪ್ರೊಡಕ್ಷನ್ಸ್ ಲಾಂಛನದಲ್ಲಿ ಜಿ.ರಾಮಾಂಜಿನಿ ಕಥೆ ಬರೆದು ಬಹುಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ 'ಓ ಮೈ ಲವ್' ಚಿತ್ರಕ್ಕೆ ಕಳೆದ ವಾರ ವಿ. ನಾಗೇಂದ್ರ ಪ್ರಸಾದ್ ರಚಿಸಿದ 'ಏನಾಯ್ತೋ ಕಾಣೆ.. ಏನಾಯ್ತೋ ಕಾಣೆ, ತಂಗಾಳಿ ಸುರಿದಂತೆ.ತಂಪಾದೆ ನಾನು...' ಎನ್ನುವ ಹಾಡನ್ನು ವಿ. ಮುರಳಿ ಅವರ ನೃತ್ಯ ನಿರ್ದೇಶನದಲ್ಲಿ ನಾಯಕ ಅಕ್ಷಿತ್ ಶಶಿಕುಮಾರ್, ನಾಯಕಿ ಕೀರ್ತಿ ಕಲ್ಕೆರೆ, ದೀಪಿಕಾ ಆರಾದ್ಯ , ಅಕ್ಷತಾ ,ಶೌರ್ಯ. ಸುವೇದ್ ಅಭಿನಯಿಸಿದ ಹಾಡನ್ನು ಯಲಹಂಕದ ನಿಟ್ಟೆ ಮೀನಾಕ್ಷಿ ಕಾಲೇಜಿನಲ್ಲಿ ಚಿತ್ರೀಕರಿಸಲಾಯಿತು. ಈ ಹಾಡಿನೊಂದಿಗೆ ಚಿತ್ರದ ಶೇ.90 ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಉಳಿದ ಮೂರು ಹಾಡುಗಳ ಚಿತ್ರೀಕರಣ ಬಾಕಿ ಉಳಿದಿದೆ. ಸ್ಮೈಲ್ ಶ್ರೀನು ಚಿತ್ರಕತೆ-ಸಂಭಾಷಣೆ ಬರೆದು ನಿರ್ದೇಶಿಸುತ್ತಿದ್ದಾರೆ. ಇದೊಂದು ಲವ್‌ಸ್ಟೋರಿ ಆಗಿದ್ದರೂ ಕಾಮಿಡಿ, ಸೆಂಟಿಮೆಂಟ್ ಜೊತೆಗೆ ಭರ್ಜರಿ ಆಕ್ಷನ್ನೂ ಅಷ್ಟೇ ಪ್ರಾಮುಖ್ಯತೆ ನೀಡಲಾಗಿದೆ. ಚಿತ್ರದಲ್ಲಿ ಹಿರಿಯ ನಿರ್ದೇಶಕ ಎಸ್.ನಾರಾಯಣ್ ಹಾಗೂ ತೆಲುಗು ಖಳನಟ ದೇವ್‌ಗಿಲ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವುದು ಅಲ್ಲದೆ ಜಿ.ರಾಮಾಂಜಿನಿ ಅವರಂಥ ಸದಭಿರುಚಿಯ ನಿರ್ಮಾಪಕರು ಹಾಗೂ ಪಾತ್ರಕ್ಕೆ ನ್ಯಾಯ ಒದಗಿಸುವಂಥ ಕಲಾವಿದರು ಸಿಕ್ಕಿರುವುದು ನನ್ನ ಅದೃಷ್ಟ ಎನ್ನುತ್ತಾರೆ ನಿರ್ದೇಶಕ ಶ್ರೀನು.

ಇಂದು ಕೊಹ್ಲಿ ಪಡೆಗೆ | ಹಾರ್ದಿಕ್, ಭುವನೇಶ್ವರ್